SRI DEVARAJ URS ACADEMY OF HIGHER EDUCATION & RESEARCH
SRI DEVARAJ URS MEDICAL COLLEGE
Tamaka, Kolar
UNIVERSITY LIBRARY & LEARNING RESOURCE CENTRE

Online Newspaper Clipping Service

ವಿಜಯ ಕರ್ನಾಟಕ

Dtd- Monday, 06th October 2025

Page No. 10

# ಲಭ್ಯವಿರುವ ತಂತ್ರಜ್ಞಾನ ಸಮರ್ಪಕವಾಗಿ ಬಳಸಿಕೊಳ್ಳಿ

**ಕೋಲಾರ:** ವಕೀಲರು ಹಾಗೂ ಕಾನೂನು ವಿದ್ಯಾರ್ಥಿಗಳು ಲಭ್ಯವಿರುವ ತಂತ್ರಜ್ಞಾನವನ್ನು ಸಮರ್ಪಕವಾಗಿ ಬಳಸಿ ಕೊಳ್ಳಬೇಕು ಎಂದು ಸರಕಾರಿ ಕಾನೂನು ಕಾಲೇಜಿನ ಸಹಾಯಕ ಪ್ರಾಧ್ಯಾಪಕಿ ಡಾ.ಆರ್.ಪದ್ಮಲತಾ ತಿಳಿಸಿದರು.

ಶ್ರೀದೇವರಾಜ ಅರಸು ಉನ್ನತ ಶಿಕ್ಷಣ ಸಂಸ್ಥೆಯ ಸಂಭಾಗಣದಲ್ಲಿ ಸ್ಕೂಲ್ ಆಫ್ ಲಾ ಹಾಗೂ ವಕೀಲ್ ಪಾಠಶಾಲಾ ವತಿ ಯಿಂದ ಹಮ್ಮಿಕೊಂಡಿದ್ದ ಆರ್ಟಿಫಿಶಿ ಯಲ್ ಇಂಟೆಲಿಜೆನ್ಸ್ ಹಾಗೂ ಕಾರ್ಪೊರೇಟ್ ಲಾ ವಿಷಯದ ಕುರಿತ ಒಂದು ದಿನದ ಅಂತರಾಷ್ಟ್ರೀಯ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದರು.

ಪ್ರತಿಯೊಂದು ಕ್ಷೇತ್ರದಲ್ಲಿಯೂ ಕೃತಕ ಬುದ್ಧಿಮತ್ತೆಯನ್ನು ಬಳಕೆ ಮಾಡಲಾಗು ತ್ತಿದ್ದು, ಕಾನೂನು ವಿಭಾಗದಲ್ಲಿ ಎಐ ಸಮರ್ಥವಾಗಿ ಬಳಸಿಕೊಳ್ಳಬೇಕಿದೆ. ಜತೆಗೆ ಎಐ ಮೂಲಕ ವಕೀಲರು ತಮ್ಮ ಕ್ಲೈಂಟ್‌ಗೆ ಉತ್ತಮ ಸೇವೆ ನೀಡಲು ಸಾಧ್ಯ ವಾಗಲಿದೆ. ಆದರೆ, ಸಂಪೂರ್ಣ ವಾಗಿ ತಂತ್ರಜ್ಞಾನದ ಮೇಲೆ ಅವಲಂಬನೆಯಾ ಗದೆ ಪುಸ್ತಕಗಳು ಹಾಗೂ ನ್ಯಾಯಾ ಲಯದ ತೀರ್ಪುಗಳನ್ನು ಅಧ್ಯಯನ ಮಾಡಬೇಕಿದೆ ಎಂದು ಹೇಳಿದರು.




ಶ್ರೀ ದೇವರಾಜ ಅರಸು ಸ್ಕೂಲ್ ಆಫ್ ಲಾ ವತಿಯಿಂದ ಹಮ್ಮಿಕೊಂಡಿದ್ದ ಒಂದು ದಿನದ ಅಂತಾರಾಷ್ಟ್ರೀಯ ಕಾರ್ಯಾಗಾರವನ್ನು ಗಣ್ಯರು ಉದ್ಘಾಟಿಸಿದರು.

ಎಸ್‌ಡಿಯುಎಚ್‌ಇಆರ್ ಕುಲಸಚಿವ ಡಾ.ಸಿ.ಮುನಿನಾರಾಯಣ ಮಾತನಾಡಿ, ಕಾಲಕ್ಕೆ ತಕ್ಕಂತೆ ವಕೀಲರು ತಂತ್ರಜ್ಞಾನವನ್ನು ಅಳವಡಿಸಿ ಕೊಳ್ಳಬೇಕು ಹಾಗೂ ಪ್ರಸ್ತುತತೆ ತಕ್ಕಂತೆ ತಮ್ಮನ್ನು ಬದಲಾವಣೆ ಮಾಡಿಕೊಂಡರೆ ಮಾತ್ರವೇ ಪ್ರಕರಣಗಳು ಬರುತ್ತವೆ ಎಂದರು.

ಕಾನೂನು ವಿದ್ಯಾರ್ಥಿಗಳು ಲಭ್ಯ ವಿರುವ ತಂತ್ರಜ್ಞಾನವನ್ನು ಒಳ್ಳೆಯ ಉದ್ದೇ ಶಕ್ಕಾಗಿ ಬಳಸಿ ಕೊಳ್ಳಬೇಕು. ಕೃತಕ ಬುದ್ಧಿ ಮತ್ತೆಯಿಂದ ಅನು ಕೂಲಗಳಷ್ಟೇ ಅನನುಕೂಲಗಳಿದ್ದು ಯುವಕರು ಎಚ್ಚರವಾಗಿರ ಬೇಕು. ತಂತ್ರಜ್ಞಾನದಿಂದ ಪರಿ ಹಾರ ಮಾರ್ಗ ಕಂಡುಕೊಳ್ಳಬೇಕೇ ಹೊರತು, ಪರಿಹಾರವನ್ನೇ ತಂತ್ರಜ್ಞಾನ ಪಡೆಯ ಬಾರದು ಎಂದು ಸಲಹೆ ನೀಡಿದರು.

ಸ್ಕೂಲ್ ಆಫ್ ಲಾ ಪ್ರಾಂಶುಪಾಲ ಡಾ.ಸಿ.ಕೌಶಿಕ್, ಕಾನೂನು ಪದವಿಯಲ್ಲಿ ಎಐ ತಂತ್ರಜ್ಞಾನದ ಮಹತ್ವ ಹಾಗೂ ಕಾನೂನಾತ್ಮಕ, ನೈತಿಕ ಹಾಗೂ ರಚನಾತ್ಮಕ ಸವಾಲುಗಳ ಕುರಿತು ತಿಳಿಸುವ ಉದ್ದೇಶ ದಿಂದ ಅಂತರಾಷ್ಟ್ರೀಯ ಕಾರ್ಯಾಗಾರ ವನ್ನು ಹಮ್ಮಿಕೊಂಡಿದ್ದು, ಮುಂದಿನ ದಿನಗಳಲ್ಲಿ ಮತ್ತಷ್ಟು ಕಾರ್ಯಕ್ರಮ ಗಳನ್ನು ಹಮ್ಮಿಕೊಳ್ಳಲಾಗುವುದು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ವಿಷಯ ತಜ್ಞರು ಎಐ ಅನುಕೂಲಗಳು, ಮಿತಿಗಳು ಹಾಗೂ ಸವಾಲುಗಳ ಕುರಿತು ವಿಷಯ ಮಂಡಿಸಿದರು. ಈ ವೇಳೆ ಎಸ್‌ಡಿಯುಎಚ್‌ಇಆರ್‌ನ ಡಾ. ಅರವಿಂದ ನಟರಾಜನ್, ವಕೀಲ್ ಪಾಠಶಾಲಾ ಟ್ರಸ್ಟಿ ಎನ್.ಮಮತಾ, ನಿರ್ದೇಶಕ ವಿ. ಮಂಜುನಾಥ್ ಸೇರಿದಂತೆ ಪ್ರಮುಖರಿದ್ದರು.